**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 612/2019**

| | | | |
|---|---|---|---|
| **ಹೆಸರು** | **:** | **ಪರಶುರಾಮ ಪೀಡಕರ್** | **ಚಾಸಾ. 5** |
| **ತಂದೆಯ ಹೆಸರು** | **:** | **ಸಾಬು** | **ಪ್ರಾ.ಸಾ. 4** |
| **ವಯಸ್ಸು** | **:** | **66 ವರ್ಷ** | **ದಿನಾಂಕಃ 06-11-2025** |
| **ಉದ್ಯೋಗ** | **:** | **ನಿವೃತ್ತ ಅಬಕಾರಿ ನಿರೀಕ್ಷಕರು** | |
| **ವಾಸಸ್ಥಳ** | **:** | **ಬಿಜಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 05-03-2019 ರಿಂದ 06-06-2019 ರವರೆಗೆ ಚಿಂಚೋಳಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 11-05-2019 ರಂದು ನಾನು, ಚಾಸಾ 3, ಪಂಚರಾದ ಚಾಸಾ-1 ಮತ್ತು 2 ರವರು ಚತ್ರಸಾಲಾ, ಗಂಗನಪಳ್ಳಿ ರಸ್ತೆಯ ಮದ್ಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಒಂದು ಬಜಾಜ ದ್ವಿಚಕ್ರ ವಾಹನದಲ್ಲಿ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ಬಂದಿರುತ್ತಾನೆ. ಸದರಿ ವಾಹನದ ಸಂಖ್ಯೇ KA 32 ER 4488 ಇತ್ತು. ಆಗ ನಾನು ಸದರಿ ವಾಹನವನ್ನು ನಿಲ್ಲಿಸಿ ತಪಾಸಣೆ ಮಾಡಿದಾಗ 3 ರಟ್ಟಿನ ಪೆಟ್ಟಿಗೆಗಳಲ್ಲಿ 180 ML ಅಳತೆಯ 40 ರಿಂದ 48 ವಿಸ್ಕಿ ಪ್ಯಾಕೆಟಗಳು ಇದ್ದವು. ಇನ್ನೊಂದು ಪೆಟ್ಟಿಗೆಯಲ್ಲಿ 180 ML ಅಳತೆಯ 48 US ವಿಸ್ಕಿ ಕಾಜಿನ ಬಾಟಲಿಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ 3 ಬಾಟಲಿಗಳನ್ನು ಪ್ರತ್ಯೇಕವಾಗಿ ಜಪ್ತಿ ಮಾಡಿರುತ್ತೇನೆ. ನಂತರ ನಾನು ಜಪ್ತಿ ಪಂಚನಾಮೆ ಮಾಡಿ ಅದನ್ನು ಪಂಚರಿಗೆ ಓದಿ ಹೇಳಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9-30 ರಿಂದ 10-30 ರವರೆಗೆ ಜರಿಗಿಸಿರುತ್ತೇನೆ. ನಂತರ ವಾಹನ, ಜಪ್ತಿ ಮಾಡಿದ ಮುದ್ದೆಮಾಲುಗಳನ್ನು ಕಚೇರಿಗೆ ತೆಗೆದುಕೊಂಡು ಬಂದು ಪ್ರಕರಣ ದಾಖಲಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6ರವರಿಗೆ ಸಲ್ಲಿಸಿರುತ್ತೇನೆ.

ಈಗ ನೋಡುತ್ತಿರುವ ನಿಪಿ-1ರ  ಪಂಚನಾಮೆ ನಾನೇ ಜರುಗಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-2ರ  ಮಾದರಿ ಸೀಲ್ ಜರುಗಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಶೋಧನ ಸಮುಚಿತ ಪತ್ರ ನಾನೇ ತಯಾರಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ

ಇದೆ. ಸದರಿ ಶೋಧನ ಸಮುಚಿತ ಪತ್ರವನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದೂರು ನಾನೇ ಸಲ್ಲಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ-4 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪ್ರ.ವ.ವರದಿ ನಾನೇ ದಾಖಲಿಸಿದ್ದು ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರ.ವ.ವರದಿಯನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಮು.ಮಾ-1 ರಿಂದ 4ನ್ನು ನಾನು 1ನೇ ಆರೋಪಿಯಿಂದ ಜಪ್ತಿ ಮಾಡಿದ್ದೇನೆ.

ದಿನಾಂಕ 21-05-2019 ರಂದು ಜಪ್ತಿ ಮಾಡಿದ ಮು.ಮಾ-1 ರಿಂದ 4ನ್ನು ರಾಸಾಯನಿಕ ಪರೀಕ್ಷೆಗಾಗಿ ಒಂದು ಪತ್ರದ ಮುಖಾಂತರ ಕಳುಹಿಸಿದ್ದೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿ ಪರವಾಗಿ ಶ್ರೀ ASH ವಕೀಲರಿಂದಃ**

ಆಗ ನಾನು ರಸ್ತೆ ಗಾವಲು ಮಾಡುತ್ತಿದ್ದೆ. ನಾನು ಆ ದಿನ ಕಛೇರಿಯಿಂದ ನೇರವಾಗಿ ರಸ್ತೆ ಗಾವಲು ಮಾಡಲು ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಗಂಗನಪಳ್ಳಿದಿಂದ 500 ಮೀಟರ ದೂರದಲ್ಲಿ ರಸ್ತೆಗಾವಲು ಮಾಡುತ್ತಿದ್ದೆ. ಗಂಗನಪಳ್ಳಿಯಿಂದ ಚತ್ರಸಾಲಾ ಗ್ರಾಮ 6 ರಿಂದ 7 ಕಿ.ಮೀ. ದೂರದಲ್ಲಿದೆ. ಗಂಗನಪಳ್ಳಿಯಿಂದ ಚತ್ರಸಾಲಾ ಗ್ರಾಮ 9 ರಿಂದ 10 ಕಿ.ಮೀ. ದೂರದಲ್ಲಿದೆ ಎಂದು ಸೂಚಿಸಿದಾಗ ಸಾಕ್ಷಿ ನಾನು ಅಂದಾಜಿನ ಮೇಲೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಗಂಗನಪಳ್ಳಿಯಾದ ನಂತರ ಭಕ್ತಂಪಳ್ಳಿ, ಬೂರ್ಗಂಪಳ್ಳಿ ಗ್ರಾಮ ಬರುತ್ತದೆ. ಭಕ್ತಂಪಳ್ಳಿಯಾದ ನಂತರ ಗಣಪುರ ಗ್ರಾಮ ಬರುತ್ತದೆ ಎಂದರೆ ಸಾಕ್ಷಿ ನನಗೆ ತಿಳಿದಂತೆ ಬೂರ್ಗಂಪಳ್ಳಿ ಬರುತ್ತದೆ ಎಂದು ನುಡಿಯುತ್ತಾರೆ. ಗಣಪುರ ಗ್ರಾಮದ ನಂತರ ಬೂರ್ಗಪಳ್ಳಿ ಬರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಗಣಪುರ ಗ್ರಾಮದಿಂದ ಚತ್ರಸಾಲಾ ಗ್ರಾಮ ಕಾಣುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಚುನಾವಣೆ ಸಮಯಕ್ಕೆ ಪ್ರತಿಯೊಂದು ಕ್ರಾಸನಲ್ಲಿ ಮಿಲಿಟರಿ ಸಿಬ್ಬಂದಿ ನಿಂತಿರುತ್ತಾರೆ ಎಂದರೆ ಸರಿಯಲ್ಲ. ಚತ್ರಸಾಲಾದಲ್ಲಿ ಮಿಲಿಟರಿ ಸಿಬ್ಬಂದಿ ಇದ್ದರು ಎಂದರೆ ಸಾಕ್ಷಿ ಸುಲೇಪೇಟನಲ್ಲಿ ಇದ್ದರು ಎಂದು ನುಡಿಯುತ್ತಾರೆ. ಚತ್ರಸಾಲಾದಲ್ಲಿ ಪಂಚಾಯಿತಿ ಕಛೇರಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ನಾನು 10 ರಿಂದ 15 ವಾಹನಗಳನ್ನು ತಪಾಸಣೆ ಮಾಡಿದ್ದೇನೆ. ಸದರಿ ವಾಹನಗಳ ಸಂಖ್ಯೆ ಮತ್ತು ವಾಹನ ಚಾಲಕರ ಹೆಸರು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮು.ಮಾ-1 ರಿಂದ 4 ತರಹದ ಮದ್ಯಪಾನದ ಡಬ್ಬಿಗಳನ್ನು ದ್ವಿಚಕ್ರ ವಾಹನದ ಮೇಲೆ ಇಡಲು ಸಾಧ್ಯವಿಲ್ಲ ಮತ್ತು ಇಟ್ಟರೆ ವಾಹನ

ಚಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಮದ್ಯಪಾನ ಎಲ್ಲಿಂದ ತಂದಿರುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಸಾಮಾನ್ಯವಾಗಿ ಮದ್ಯಪಾನದ ಬಾಟಲಿಗಳ ಮೇಲೆ ವೈನಶಾಪನ ಚಿಹ್ನೆ ಇರುತ್ತದೆ ಎಂದರೆ ಸರಿಯಲ್ಲ.

ಆ ದಿನ ಪಂಚರನ್ನು ನಾನು ಕರೆದುಕೊಂಡು ಬಂದಿದ್ದೇನೆ. ಈ ರೀತಿ ದೂರಿನಲ್ಲಿ ಉಲ್ಲೇಖವಿಲ್ಲ ಎಂದರೆ ಸಾಕ್ಷಿ ಪಂಚನಾಮೆಯಲ್ಲಿ ಉಲ್ಲೇಖವಿದೆ ಎಂದು ನುಡಿಯುತ್ತಾರೆ. ಸದರಿ ಪಂಚರನ್ನು ತಾಲ್ಲೂಕ ಕಛೇರಿ ಮುಂದೆಯಿಂದ ಕರೆದುಕೊಂಡು ಬಂದಿದ್ದೇನೆ. ಈ ರೀತಿ ಪಂಚನಾಮೆಯಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ಆ ದಿನ ನಾನು ರಸ್ತೆಗಾವಲು ಮಾಡಿರುವ ಬಗ್ಗೆ, ಪಂಚನಾಮೆ ಮಾಡಿರುವ ಬಗ್ಗೆ ಮತ್ತು ದಾಳಿ ಮಾಡಿರುವ ಬಗ್ಗೆ, ಮು.ಮಾ-1 ರಿಂದ 4ನ್ನು ಜಪ್ತಿ ಮಾಡಿರುವ ಬಗ್ಗೆ, ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕೆ ಸಂಖ್ಯೆಗೊಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚೀಲವನ್ನು ಆರೋಪಿಯಿಂದ ಜಪ್ತಿ ಮಾಡಿದ್ದೇನೆ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಆರೋಪಿ ಪರವಾಗಿ ಶ್ರೀ NCH ವಕೀಲರಿಂದಃ</u>**

2ನೇ ಆರೋಪಿಗೆ ಹಾಗೂ ಜಪ್ತಿ ಮಾಡಿದ ವಾಹನದ ಬಗ್ಗೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸಾಕ್ಷಿ ನಾವು 1ನೇ ಆರೋಪಿಗೆ ವಾಹನದ ಬಗ್ಗೆ ಕೇಳಿದಾಗ ಸದರಿ ವಾಹನ 2ನೇ ಆರೋಪಿಗೆ ಸೇರಿದ್ದು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 2ನೇ ಆರೋಪಿ ತನ್ನ ವಾಹನವನ್ನು ಮಾರಾಟ ಮಾಡಿದರೂ ಸಹ ಅವನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ .ದಂ. ಚಿಂಚೋಳಿ**